# ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ


(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ವಿ.ಐ.ಟಿ.ಸಿ. ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು-560 001

**ದೂರವಾಣಿ ಸಂ.080-2286866** **ಫ್ಯಾಕ್ಸ್ ಸಂ.080-22865865**


**ಸಂ. ಕೆಎಸ್‌ಸಿಡಿಸಿ/ಪ್ಯ(ಉ)/ಟಿಎನ್-1(2017-18)/2016-17** **ದಿನಾಂಕ: 08.03.2017**

## ತೆಂಗಿನ ಸಿಪ್ಪೆ ಸರಬರಾಜಿಗೆ ಸರಬರಾಜುದಾರರಿಗೆ ಅಹ್ವಾನ

2017-18ನೇ ಸಾಲಿಗೆ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ ವಿವಿಧ ನಾರು ಉತ್ಪಾದನಾ ಘಟಕಗಳಿಗೆ **ಸೆಪ್ಟೆಂಬರ್ 2017ರ ಅಂತ್ಯದವರೆಗೆ** ಸುಮಾರು ರೂ.20.00 ಲಕ್ಷ ಮೌಲ್ಯದ ತೆಂಗಿನ ಸಿಪ್ಪೆ ಖರೀದಿಗಾಗಿ ಸರಬರಾಜುದಾರರನ್ನು ಟೆಂಡರ್ ಮುಖಾಂತರ ಆಹ್ವಾನಿಸಲಾಗಿದೆ.

ಖರೀದಿ ಪ್ರಕ್ರಿಯೇಗೆ ಅನ್ವಯವಾಗುವ ನಿಯಮವಾಳಿ, ಷರತ್ತು ಮತ್ತು ನಿಬಂಧನೆಗಳು ಕೆಳಗಿನಂತಿವೆ.

**ಷರತ್ತು ಮತ್ತು ನಿಬಂಧನೆಗಳು :**

1. ತೆಂಗಿನ ಸಿಪ್ಪೆ ಸರಬರಾಜು ಮಾಡಬೇಕಾದ ಸ್ಥಳಗಳ ವಿವರ :
    1. **ಹುಣಸನಹಳ್ಳಿ, ರಾಮನಗರ ಜಿಲ್ಲೆ**
    2. **ನಾಗಮಂಗಲ, ಮಂಡ್ಯ ಜಿಲ್ಲೆ**
    3. **ಬೇಗೂರು, ಚಾಮರಾಜನಗರ ಜಿಲ್ಲೆ**
    4. **ಗುಬ್ಬಿ, ತುಮಕೂರು ಜಿಲ್ಲೆ**
    5. **ತಿಪಟೂರು, ತುಮಕೂರು ಜಿಲ್ಲೆ**
    6. **ನವಿಲೆ ತಿಮ್ಮಲಾಪುರ, ಹಾಸನ ಜಿಲ್ಲೆ**
    7. **ಬಾಣಾವರ, ಹಾಸನ ಜಿಲ್ಲೆ**
    8. **ಗಂಡಸಿ, ಹಾಸನ ಜಿಲ್ಲೆ**
    9. **ದೊಡ್ಡಘಟ್ಟ, ಚಿತ್ರದುರ್ಗ ಜಿಲ್ಲೆ**
    10. **ರಂಗನಾಥಪುರ, ಚಿತ್ರದುರ್ಗ ಜಿಲ್ಲೆ**
    11. **ಅಂಕೋಲಾ, ಉತ್ತರ ಕನ್ನಡ ಜಿಲ್ಲೆ**
    12. **ವಕ್ವಾಡಿ, ಉಡುಪಿ ಜಿಲ್ಲೆ**

2. ಟೆಂಡರ್‌ದಾರರು ಮೇಲೆ ನಮೂದಿಸಿರುವ ಎಲ್ಲಾ ನಾರು ಉತ್ಪಾದನಾ ಕೇಂದ್ರಗಳಿಗೆ ಅಥವಾ ಅವರ ವ್ಯಾಪ್ತಿಯ ಉತ್ಪಾದನಾ ಕೇಂದ್ರಗಳಿಗೆ ಟೆಂಡರ್‌ನಲ್ಲಿ ಭಾಗವಹಿಸಬಹುದು. **ಟೆಂಡರ್ ದಾಖಲಾತಿಗಳನ್ನು ಸಲ್ಲಿಸಬೇಕಾದ ವಿಳಾಸ : ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ವಿ.ಐ.ಟಿ.ಸಿ. ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು-560 001.**

    **ಅಥವಾ**

    **ಸ್ಥಳೀಯ ವಿಭಾಗೀಯ ವ್ಯವಸ್ಥಾಪಕರು (ಕ್ರಮ ಸಂ. 1 ರಲ್ಲಿ ನಮೂದಿಸಿರುವ ಸ್ಥಳ)**

3. **ಟೆಂಡರ್ ವೇಳಾಪಟ್ಟಿ :**

    ಅ. ಅರ್ಜಿಗಳನ್ನು ಪಡೆಯುವ ದಿನಾಂಕ ಮತ್ತು ವೇಳೆ – **13.03.2017ರಿಂದ 28.03.2017ರವರೆಗೆ ಮಧ್ಯಾಹ್ನ 2.00 ಗಂಟೆಯೊಳಗೆ**

    ಆ. ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ– **28.03.2017, ಸಾಯಂಕಾಲ 5.00 ಗಂಟೆಯೊಳಗೆ.**

    ಇ. ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ – **30.03.2017, ಬೆಳಿಗ್ಗೆ 11.00 ಗಂಟೆಗೆ.**

    ಈ. ಟೆಂಡರ್ ತೆರಯುವ ಸ್ಥಳ – ವಿ.ಐ.ಟಿ.ಸಿ. ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು-560001.

4. ತೆಂಗಿನ ಸಿಪ್ಪೆ ಸರಬರಾಜಿನ ಅವಧಿ – ಸೆಪ್ಟೆಂಬರ್ 2017ರವರೆಗೆ

**5.** **240** ಕೆಜಿ ತೂಕದ **1000** ಸಂ. ತೆಂಗಿನ ಸಿಪ್ಪೆಗೆ ದರ ಸರಾಸರಿ ಈ ಕೆಳಕಂಡ ಕೇಂದ್ರವಾರು ನಮೂದಿಸಿರುವ ದರಗಳಿಗೆ ಮೀರತಕ್ಕದ್ದಲ್ಲ. ಹಾಗೂ ಸ್ಪರ್ಧಾತ್ಮಕ ದರ ನಮೂದಿಸಲು ಕೋರಿದೆ. ಹಾಗೂ ಕೇಂದ್ರವಾರು ಅಗತ್ಯವಿರುವ ತೆಂಗಿನ ಸಿಪ್ಪೆ ಸರಬರಾಜಿನ ಅಂದಾಜು ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿದೆ.

| ಕ್ರ.ಸ. | ತೆಂಗಿನ ನಾರಿನ ಘಟಕ | ಸರಾಸರಿ ದರ (ರೂ.ಗಳಲ್ಲಿ) | ಮಾರ್ಚ್ 2017ರವರೆಗೆ ಸರಬರಾಜಿನ ಅಂದಾಜು ಪ್ರಮಾಣ |
|---|---|---|---|
| 1 | ಹುಣಸನಹಳ್ಳಿ, ರಾಮನಗರ ಜಿಲ್ಲೆ, | 450–00 | 12,00,000 ಸಂ. |
| 2 | ನಾಗಮಂಗಲ, ಮಂಡ್ಯ ಜಿಲ್ಲೆ, | 350–00 | 12,00,000 ಸಂ. |
| 3 | ಬೇಗೂರು, ಚಾಮರಾಜನಗರ ಜಿಲ್ಲೆ, | 600–00 | 12,00,000 ಸಂ. |
| 4 | ತಿಪಟೂರು, ತುಮಕೂರು ಜಿಲ್ಲೆ, | 325–00 | 12,00,000 ಸಂ. |
| 5 | ಗುಬ್ಬಿ, ತುಮಕೂರು ಜಿಲ್ಲೆ, | 300–00 | 2,00,000 ಸಂ. |
| 6 | ನವಿಲೆ ತಿಮ್ಮಲಾಪುರ ಹಾಸನ ಜಿಲ್ಲೆ | 300–00 | 12,00,000 ಸಂ. |
| 7 | ಬಾಣಾವರ ಹಾಸನ ಜಿಲ್ಲೆ | 380–00 | 12,00,000 ಸಂ. |
| 8 | ಗಂಡಸಿ, ಹಾಸನ ಜಿಲ್ಲೆ | 350–00 | 12,00,000 ಸಂ. |
| 9 | ದೊಡ್ಡಘಟ್ಟ, ಚಿತ್ರದುರ್ಗ ಜಿಲ್ಲೆ | 350–00 | 12,00,000 ಸಂ. |
| 10 | ರಂಗನಾಥಪುರ, ಚಿತ್ರದುರ್ಗ ಜಿಲ್ಲೆ | 350–00 | 12,00,000 ಸಂ. |
| 11 | ಆಂಕೋಲಾ, ಉತ್ತರ ಕನ್ನಡ ಜಿಲ್ಲೆ | 750–00 | 2,00,000 ಸಂ. |
| 12 | ವಕ್ವಾಡಿ, ಉಡುಪಿ ಜಿಲ್ಲೆ | 470–00 | 12,00,000 ಸಂ. |

**6.** ಇ.ಎಂ.ಡಿ. ಮೊತ್ತನ್ನು "ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಹೆಸರಿಗೆ ಡಿ.ಡಿ. ಮುಖಾಂತರ ಸಲ್ಲಿಸುವುದು. ಯಶಸ್ವಿ ಟೆಂಡರ್‌ದಾರರು ಭರಿಸಿದ ಮೊತ್ತವನ್ನು ಸೆಪ್ಟೆಂಬರ್ **2017**ರವರೆಗೆ ಭದ್ರತಾ ಠೇವಣಿಯಾಗಿ ಇರಿಸಲಾಗುವುದು. ಇದಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ. ಟೆಂಡರ್ ಅವಧಿ ಮುಕ್ತಾಯದ ನಂತರ ಇ.ಎಂ.ಡಿ. ಮೊತ್ತವನ್ನು ಹಿಂದಿರುಗಿಸಲಾಗುವುದು. ಕೇಂದ್ರವಾರು ನಿಗಧಿಪಡಿಸಿರುವ ಈ ಕೆಳಕಂಡ ಇ.ಎಂ.ಡಿ. ಮೊತ್ತಗಳಂತೆ ಟೆಂಡರ್‌ದಾರರು ಡಿ.ಡಿ.ಯನ್ನು ಪಡೆದು ಸಲ್ಲಿಸುವುದು.

| ಕ್ರ.ಸ. | ತೆಂಗಿನ ನಾರಿನ ಘಟಕ | ಇ.ಎಂ.ಡಿ. (ರೂ.ಗಳಲ್ಲಿ) |
|---|---|---|
| 1 | ಹುಣಸನಹಳ್ಳಿ, ರಾಮನಗರ ಜಿಲ್ಲೆ, | 15,000–00 |
| 2 | ನಾಗಮಂಗಲ, ಮಂಡ್ಯ ಜಿಲ್ಲೆ, | 15,000–00 |
| 3 | ಬೇಗೂರು, ಚಾಮರಾಜನಗರ ಜಿಲ್ಲೆ, | 15,000–00 |
| 4 | ತಿಪಟೂರು, ತುಮಕೂರು ಜಿಲ್ಲೆ, | 15,000–00 |
| 5 | ಗುಬ್ಬಿ, ತುಮಕೂರು ಜಿಲ್ಲೆ, | 5,000–00 |
| 6 | ನವಿಲೆ ತಿಮ್ಮಲಾಪುರ, ಹಾಸನ ಜಿಲ್ಲೆ | 15,000–00 |
| 7 | ಬಾಣಾವರ ಹಾಸನ ಜಿಲ್ಲೆ | 15,000–00 |
| 8 | ಗಂಡಸಿ, ಹಾಸನ ಜಿಲ್ಲೆ | 15,000–00 |
| 9 | ದೊಡ್ಡಘಟ್ಟ ಚಿತ್ರದುರ್ಗ ಜಿಲ್ಲೆ | 15,000–00 |
| 10 | ರಂಗನಾಥಪುರ, ಚಿತ್ರದುರ್ಗ ಜಿಲ್ಲೆ | 15,000–00 |
| 8 | ಆಂಕೋಲಾ, ಉತ್ತರ ಕನ್ನಡ ಜಿಲ್ಲೆ | 5,000–00 |
| 9 | ವಕ್ವಾಡಿ, ಉಡುಪಿ ಜಿಲ್ಲೆ | 15,000–00 |

7. ಟೆಂಡರ್‌ದಾರರು ತಮ್ಮ ವೈಯಕ್ತಿತ ಗುರುತು ಮತ್ತು ವಿಳಾಸದ ಗುರುತಿಗಾಗಿ ಆಧಾರ್ ಕಾರ್ಡ್/ಡ್ರೈವಿಂಗ್ ಲೈಸೆನ್ಸ್/ಪ್ಯಾನ್ ಕಾರ್ಡ್/ಪಾಸ್‌ಪೋರ್ಟ್ ಪ್ರತಿ ಯಾವುದಾದರೂ ಒಂದು ಲಗತ್ತಿಸುವುದು.

8. ಟೆಂಡರ್‌ದಾರರು ವ್ಯವಹರಿಸುತ್ತಿರುವ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸುವುದು.

9. ಟೆಂಡರ್‌ದಾರರು ಟೆಂಡರ್ ದರವನ್ನು ನಮೂದಿಸುವಾಗ 1000 ಸಂ. ತೆಂಗಿನ ಸಿಪ್ಪೆಯ ತೂಕ ಕನಿಷ್ಠ 240 ಕೆ.ಜಿ. ಇರಬೇಕು. **ಹಾಗೂ ಅನುಬಂಧ-2ರ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ಅಗತ್ಯ ದಾಖಲಾತಿಗ ಳೊಂದಿಗೆ ತಪ್ಪದೆ ಸಲ್ಲಿಸುವುದು. ಒಂದು ವೇಳೆ ಷರತ್ತು ಪೂರ್ಣಗೊಳ್ಳದಿದ್ದಲ್ಲಿ, ಅಂತಹ ಟೆಂಡರ್‌ನ್ನು ನಿರಾಕರಿಸಲಾಗುವುದು.**

10. ಟೆಂಡರ್‌ದಾರರು ನಮೂದಿಸುವ ದರ ಎಲ್ಲಾ ವೆಚ್ಚ (ಸಾಗಾಣಿಕೆ ಮತ್ತು ಇತರೆ ವೆಚ್ಚ)ಗಳನ್ನು ಒಳಗೊಂಡಿದ್ದು, ಕ್ರಮ ಸಂ. 1ರಲ್ಲಿ ತಿಳಿಸಿರುವ ಸ್ಥಳಗಳಿಗೆ ಸರಬರಾಜು ಮಾಡುವುದು.

**11. <u>ಟೆಂಡರ್‌ದಾರರ ಆಯ್ಕೆ ಪ್ರಕ್ರಿಯೇ ವಿಧಾನ :</u>**

**1. ದಿನಾಂಕ: 30.03.2017ರ ಬೆಳಿಗ್ಗೆ 11.00 ಗಂಟೆಗೆ ಸಮಿತಿಯು ಬಂದ ಟೆಂಡರ್ ಲಕೋಟೆಗಳನ್ನು ಸೀಲ್ ಆಗಿರುವುದನ್ನು ಮೊದಲು ಪರಿಶೀಲಿಸುತ್ತಾ, ಸೀಲ್ ಮಾಡಿರುವುದನ್ನು ಪರಿಗಣಿಸಿ ಆಯಾ ಲಕೋಟೆಗಳ ಮೇಲೆ ಷರದೊಂದಿಗೆ ಸಹಿ ಮಾಡುವರು. ಸೀಲ್ ಮಾಡದೆ ಇರುವ ಲಕೋಟೆಗಳನ್ನು ತಿರಸ್ಕರಿಸಿ, ತಿರಸ್ಕರಿಸಿರುವ ಷರಾದೊಂದಿಗೆ ಸಹಿ ಮಾಡುವರು.**

**2. ಪರಿಗಣಿಸಿರುವ ಲಕೋಟೆಗಳನ್ನು ಮಾತ್ರ ತೆರೆದು, ಅರ್ಜಿಗಳು ಪೂರ್ಣ ಭರ್ತಿಯಾಗಿರುವುದನ್ನು, ಲಗತ್ತುಗಳನ್ನು ಪರಿಶೀಲಿಸಿ, ನಂತರ ನಮೂದಿಸಿದ ದರವನ್ನು ಟಿಪ್ಪಣಿ ಮಾಡಿಕೊಳ್ಳುತ್ತದೆ.**

**3. ಟಿಪ್ಪಣಿ ಮಾಡಿಕೊಂಡ ದರಗಳಲ್ಲಿ ಅತೀ ಕಡಿಮೆ ನಮೂದಾದ ದರಕ್ಕೆ ಎಲ್-1 ಎಂದು ಗುರುತಿಸುವುದು. ತದನಂತರ ದರಗಳಿಗೆ ಎಲ್-2, ಎಲ್-3 ಇತ್ಯಾದಿ ಎಂದು ಕ್ರಮವಾಗಿ ನಮೂದಿಸುವರು.**

**4. ಎಲ್-1 ದರವನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಗೆ ಶಿಫಾರಸ್ಸು ಮಾಡುವರು.**

**5. ಎಲ್-1 ದರ ನಮೂದಿಸಿದ ಸರಬರಾಜುದಾರರು ನಿಗಮದ ಎಲ್ಲಾ ಘಟಕಗಳಿಗೆ ಸರಬರಾಜು ಮಾಡಬೇಕೆಂದು ನಿಗಮವು ಅಪೇಕ್ಷಿಸುತ್ತದೆ. ಒಂದು ವೇಳೆ ಎಲ್-1 ದರ ನಮೂದಿಸಿದ ಸರಬರಾಜುದಾರರು ತಮ್ಮ ಸರಬರಾಜಿನ ಕ್ಷೇತ್ರ ಸೀಮಿತಗೊಳಿಸಿದರೆ, ಉಳಿದ ಕ್ಷೇತ್ರಕ್ಕೆ ಸರಬರಾಜು ಮಾಡಲು ಎಲ್-2 ಸರಬರಾಜುದಾರರನ್ನು ಎಲ್-1 ದರಕ್ಕೆ ಸರಬರಾಜು ಮಾಡುವಂತೆ ಆಹ್ವಾನಿಸಲಾಗುವುದು. ಈ ಕ್ರಮ ಎಲ್ಲಾ ಕ್ಷೇತ್ರಕ್ಕೆ ಸರಬರಾಜುದಾರರ ನೇಮಕಾತಿ ಆಗುವವರೆಗೆ ಪ್ರಕ್ರಿಯೇ ನಡೆಸಲಾಗುವುದು. ಒಂದೊಮ್ಮೆ ಆಗದೇ ಹೋದ ಪಕ್ಷದಲ್ಲಿ ಮರು ಟೆಂಡರ್ ಕರೆಯಲಾಗುವುದು.**

**6. ಆಯ್ಕೆಯಾದ ಸರಬರಾಜುದಾರರು ಸರಬರಾಜಿಗಾಗಿ ಒಪ್ಪಿದಲ್ಲಿ, ಲಿಖಿತ ಒಪ್ಪಿಗೆ ಪತ್ರ ನೀಡುವುದು, ತದನಂತರ, ಛಾಪಾ ಕಾಗದದಲ್ಲಿ ಕರಾರು ಮಾಡಿಕೊಳ್ಳಲಾಗುವುದು.**

12. ತೆಂಗಿನ ಸಿಪ್ಪೆ ಸರಬರಾಜುಗಾಗಿ ಬೇಡಿಕೆ ಸಲ್ಲಿಸಿದ ದಿನಾಂಕದಿಂದ ಒಂದು ವಾರದೊಳಗಾಗಿ ಆಯಾ ಘಟಕಗಳಿಗೆ ಸರಬರಾಜು ಮಾಡಿ, ದೃಢೀಕರಣ ಪಡೆದು ಈ ಕಛೇರಿಗೆ ಹಣ ಪಾವತಿಗಾಗಿ ಬಿಲ್ಲನ್ನು ಸಲ್ಲಿಸುವುದು. ಯಾವುದೇ ರೀತಿ ವಿಳಂಬಕ್ಕೆ ಆಸ್ಪದ ನೀಡಬಾರದು.

**13. ಗುಣಮಟ್ಟದ ಬಗ್ಗೆ ಬಳಕೆದಾರರು ಆಕ್ಷೇಪಣೆ ವ್ಯಕ್ತಪಡಿಸಿದ್ದಲ್ಲಿ (ತೇವಾಂಶ ಇದ್ದಲ್ಲಿ) ಪೂರ್ಣ ಲೋಡಿನ ಮೊತ್ತವನ್ನು ಪಾವತಿಸಲಾಗುವುದಿಲ್ಲ ಮತ್ತು ವಸ್ತುವನ್ನು ಹಿಂದಿರುಗಿಸಲಾಗುವುದಿಲ್ಲ.**

**14. 12,500 ಸಾವಿರ ತೆಂಗಿನ ಸಿಪ್ಪೆಗೆ (ಮಟ್ಟೆಗೆ) ಕನಿಷ್ಠ ಒಂದು ಟನ್ ನಾರು ಮತ್ತು ಎರಡು ಟನ್ ಪಿತ್ ಉತ್ಪನ್ನವಾಗುವ ಸಿಪ್ಪೆಯ ಗುಣಮಟ್ಟವಿರಬೇಕು.**

15. ಕಛೇರಿಗೆ ಬಿಲ್ಲು ಸ್ವೀಕರಿಸಿದ ದಿನದಿಂದ 30 ಕೆಲಸದ ದಿನದೊಳಗೆ ಬಿಲ್ಲಿನ ಮೊತ್ತ ಪಾವತಿಸಲಾಗುವುದು.

16. ಏನಾದರೂ ವ್ಯಾಜ್ಯ ಉಂಟಾದಲ್ಲಿ ವ್ಯವಸ್ಥಾಪಕ ನಿರ್ದೇಶಕರ ನಿರ್ಣಯ ಅಂತಿಮವಾಗಿರುತ್ತದೆ.

17. **ತೆಂಗಿನ ಸಿಪ್ಪೆ ಸರಬರಾಜಿಗಾಗಿ ಸೀಲ್ ಮಾಡಿದ ಲಕೋಟೆಗಳನ್ನು ಮಾತ್ರ ಪರಿಗಣಿಸಲಾಗುವುದು. ನಮೂದಿಸಿದ ದರ ಟೆಂಡರ್ ತೆರೆಯುವ ದಿನಾಂಕವಾದ 30.03.2017ರೊಳಗೆ ಇಲಾಖೆ ಸಿಬ್ಬಂದಿ ಅಥವಾ ಉಳಿದ ಸರಬರಾಜುದಾರರೊಂದಿಗೆ ಚರ್ಚಿಸಿದ್ದು ಗಮನಕ್ಕೆ ಬಂದರೆ, ಅಂತಹ ಸರಬರಾಜುದಾರರ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.**

18. ಕಛೇರಿಯ ಯಾವುದೇ ಸಿಬ್ಬಂದಿಯೊಂದಿಗೆ ಭ್ರಷ್ಟಾಚಾರ/ವಂಚನೆಯಲ್ಲಿ ತೊಡಗಿದ್ದು, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ಬಂದರೆ, ನೀಡಬೇಕಾದ ಬಾಕಿ ಹಣ ಮತ್ತು ಭದ್ರತಾ ಹಣ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ, ಟೆಂಡರ್‌ದಾರರು ಮತ್ತು ಸಂಬಂಧಪಟ್ಟ ಸಿಬ್ಬಂದಿಯ ಮೇಲೆ ಕಾನೂನಿನ ರೀತ್ಯ ಕ್ರಮ ಕೈಗೊಳ್ಳಲಾಗುವುದು.

19. ಹೆಚ್ಚಿನ ಮಾಹಿತಿಗಳಿಗಾಗಿ ಕಛೇರಿಯ ವೇಳೆಯಲ್ಲಿ ವ್ಯವಸ್ಥಾಪಕರು–ಉತ್ಪಾದನೆ (ಮೋಬೈಲ್ ಸಂ. 9141943430) ಇವರನ್ನು ಸಂಪರ್ಕಿಸುವುದು.

**ವ್ಯವಸ್ಥಾಪಕ ನಿರ್ದೇಶಕರು**

## ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ

**ಬೆಂಗಳೂರು**

**ಸಂ. ಕೆಎಸ್‌ಸಿಡಿಸಿ/ಪ್ರ(ಉ)/ಟಿಎನ್-1(2017-18)/2016-17** **ದಿನಾಂಕ: 08.03.2017**

### ಅನುಬಂಧ – 2 – ಅರ್ಜಿ ನಮೂನೆ

| | |
|---|---|
| 1. ಟೆಂಡರ್‌ದಾರರ ಹೆಸರು | |
| 2. ವಿಳಾಸ ಮತ್ತು ದೂರವಾಣಿ ಸಂ. | |
| 3. ಟೆಂಡರ್‌ದಾರರ ವೈಯಕ್ತಿಕ ಗುರುತು (ಜೆರಾಕ್ಸ್ ಪ್ರತಿ ಒದಗಿಸುವುದು, ಯಾವುದಾದರೂ ಒಂದು)* | **ಆಧಾರ್ ಕಾರ್ಡ್/ಡ್ರೈವಿಂಗ್ ಲೈಸೆನ್ಸ್/ಪ್ಯಾನ್ ಕಾರ್ಡ್/ಪಾಸ್‌ಪೋರ್ಟ್** |
| 4. ಟೆಂಡರ್‌ದಾರರ ಬ್ಯಾಂಕ್ ವಿವರ: (ಪಾಸ್‌ಬುಕ್ ಪ್ರತಿ ಒದಗಿಸುವುದು)* | |
| 5. ಟೆಂಡರ್‌ದಾರರು ಸರಬರಾಜಿಗಾಗಿ ಸ್ವಂತ ವಾಹನ ಹೊಂದಿರುವವರೇ; ಹೌದಾದಲ್ಲಿ ವಾಹನ ಸಂ. ನಮೂದಿಸುವುದು. | |
| 6. ಟೆಂಡರ್‌ದಾರರು ಯಾವ ವಿಭಾಗಕ್ಕೆ ಟೆಂಡರ್‌ನಲ್ಲಿ ಭಾಗವಹಿಸುವರು ಎಂಬುದರ ವಿವರ. (ಟೆಂಡರ್ ದಾಖಲಾತಿ ಷರತ್ತು ಮತ್ತು ನಿಬಂಧನೆಗಳ ಕ್ರಮ ಸಂ. 1 ರಲ್ಲಿ ನಮೂದಿಸಿರುವಂತೆ) | |
| 7. ಇ.ಎಂ.ಡಿ. ಮೊತ್ತ ರೂ.________/-ಗಳ ವಿವರ * | **ಡಿ.ಡಿ. ಸಂ. ದಿನಾಂಕ:**<br>**ಬ್ಯಾಂಕ್ ವಿವರ :** |

8. ಟೆಂಡರ್‌ದಾರರು ಟೆಂಡರ್‌ನಲ್ಲಿ ಈ ಕೆಳಕಂಡ ನಮೂನೆಯಲ್ಲಿ ದರ ನಮೂದಿಸುವುದು.

| **ಕ್ರ.ಸಂ.** | **ದಾಸ್ತಾನುಗಳ ವಿವರ** | **ದರ** | |
|---|---|---|---|
| | | **ರೂ.ಗಳಲ್ಲಿ** | **ಅಕ್ಷರಗಳಲ್ಲಿ** |
| 1 | 240 ಕೆ.ಜಿ. ತೂಕದ 1000 ಸಂಖ್ಯೆ ತೆಂಗಿನ ಸಿಪ್ಪೆಗೆ **(ಸಾಗಾಣಿಕೆ ಮತ್ತು ಎಲ್ಲಾ ವೆಚ್ಚಗಳನ್ನು ಒಳಗೊಂಡಂತೆ) ದರ ನಮೂದಿಸುವುದು.** | | |

**1.** **ನಾವು/ನಾನು ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳನ್ನು ಪೂರ್ಣವಾಗಿ ತಿಳಿದುಕೊಂಡು ಒಪ್ಪಿರುತ್ತೇವೆ ಎಂದು ದೃಢೀಕರಿಸಿದೆ.**

**2.** *** ದಾಖಲಾತಿಗಳ ಪ್ರತಿಗಳು ಮತ್ತು ಇ.ಎಂ.ಡಿ. ಮೊತ್ತದ ಡಿ.ಡಿ.ಯನ್ನು ಈ ಅರ್ಜಿ ನಮೂನೆಯೊಂದಿಗೆ ಖಡ್ಡಾಯವಾಗಿ ಸಲ್ಲಿಸಬೇಕು.**

ಟೆಂಡರ್‌ದಾರರ ಸಹಿ :

ಹೆಸರು :

ವಿಳಾಸ, ದೂರವಾಣಿ ಸಂ. :

ದಿನಾಂಕ :